**Com.O.S.** 156/2023

**DW**-1

**ಪಾಟೀ ಸವಾಲುಃ ವಾದಿ ಪರ ಶ್ರೀ ಜೆ.ಎಂ.ಎ ವಕೀಲರಿಂದಃ**

ನಿಡಿ1 ನ್ನು ವಾದಿಯರಿಗೆ ಇ-ಮೇಲ್ ಮೂಲಕ ಕಳುಹಿಸಿರುತ್ತೇವೆ. ನಿಡಿ1 ರಲ್ಲಿ ಇ-ಮೇಲ್ ವಿಳಾಸಗಳು ನಮೂದಿಲ್ಲ ಎಂದರೆ ನಿಜ. ನಿಡಿ1 ವಾದಿಯರಿಗೆ ತಲುಪಿದ ಬಗ್ಗೆ ದಾಖಲೆ ಲಭ್ಯವಿದೆ. ಅದನ್ನು ಹಾಜರುಪಡಿಸಲು ತೊಂದರೆ ಇಲ್ಲ. ಈ ವ್ಯವಹಾರಕ್ಕಿಂತ ಮೊದಲು ಯಾವತ್ತೂ ನಾವು ವಾದಿಯರ ಜೊತೆ ವ್ಯವಹಾರ ಮಾಡಿಲ್ಲ. ನಿಪಿ1 ಪರ್ಚೆಸ್ ಆರ್ಡರ್ ಕಳುಹಿಸುವ ಮೊದಲು ನಾವು ವಾದಿ ಸಂಸ್ಥೆ ಜೊತೆ ಮಾತುಕತೆ ಮಾಡಿಲ್ಲ. ನಿಡಿ1 ರಲ್ಲಿ ನಮೂದಿಸಿರುವ ದರಗಳನ್ನು ವಾದಿ ಸಂಸ್ಥೆಯ ಅಧಿಕಾರಿಗಳೊಂದಿಗೆ ಚರ್ಚಿಸಿ ನಮೂದಿಸಿದ್ದೇವೆ. ನಿಡಿ1 ರಲ್ಲಿ ನಮೂದಿಸಿರುವ ದರಗಳು ವಾದಿಯರು ಒಪ್ಪಿದ ಬಗ್ಗೆ ಬೇರೆ ದಾಖಲೆ ಇಲ್ಲ. ನಿಡಿ1 ರ ಕುರಿತು ವಾದಿಯು ಇನ್‌ವಾಯ್ಸು ನೀಡಿಲ್ಲ. ನಿಪಿ2 ವಾದಿ ಸಂಸ್ಥೆಯಿಂದ ಬಂದಿದ್ದ ಇನ್ ವಾಯ್ಸು ಎಂದರೆ ಅದು ಸುಳ್ಳಿದೆ. ನಿಪಿ2 ನ್ನು ನಾವು ಆರ್ಡರ್ ಮಾಡಿದ ಸರಕು ತಯಾರಾದ ಬಳಿಕ ಕೊಟ್ಟಿದ್ದರು ಎಂದರೆ ಸರಿಯಲ್ಲ. ನಿಡಿ1 ರಲ್ಲಿ ಮುಂಗಡ ಹಣ ಪಾವತಿಸಿದ ಬಗ್ಗೆ ನಮೂದಿಲ್ಲ. ನಿಡಿ1 ನ್ನು ವಾದಿಯರಿಗೆ ಕೊಟ್ಟೇ ಇಲ್ಲ ಎಂದರೆ ಸರಿಯಲ್ಲ. ಅದನ್ನು ಈ ದಾವೆಗೊಸ್ಕರ ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ನಿಡಿ1 ರಲ್ಲಿ ನಮೂದಿಸಿರುವ ದರಕ್ಕೆ ವಾದಿ ಒಪ್ಪಿದ ಬಗ್ಗೆ ಬೇರೆ ದಾಖಲೆ ಇಲ್ಲ. ವಾದಿ ಸಂಸ್ಥೆಯವರು 7 ದಿನಗಳ ಒಳಗೆ ಸರಕು ಸರಬರಾಜು ಮಾಡದಿದ್ದಾಗ ಅವರಿಗೆ ಆ ಬಗ್ಗೆ ಲಿಖಿತವಾಗಿ ಏನನ್ನೂ ಕೊಟ್ಟಿಲ್ಲ. ಆದರೆ ನಾನು ಅವರನ್ನು ಭೇಟಿ ಮಾಡಿ ಚರ್ಚಿಸಿದಾಗ ಮುಂಗಡ ಹಣ ಪಾವತಿಸಿದರೆ ಮಾತ್ರ 7 ದಿನಗಳ ಒಳಗೆ ಸರಕು ಸರಬರಾಜು ಮಾಡುವುದಾಗಿ ಹೇಳಿದರು. ಮಂಜುನಾಥ ರೋಲರ್ ಫ್ಲೋರ್ ಮಿಲ್ ನನಗೆ

ಸೇರಿದ್ದು ಎಂದರೆ ನಿಜ. ದಿನಾಂಕ 12.2.2020 ರಂದು ವಾದಿ ಸಂಸ್ಥೆಯವರು ನಿಪಿ3 ರಂತೆ ಪ್ರೊಫಾರ್ಮ ಇನವಾಯ್ಸು ಕಳುಹಿಸಿದ್ದಾರೆ ಎಂದರೆ ಸರಿಯಲ್ಲ. ನಮ್ಮ ಸಂಸ್ಥೆಯ ಇ–ಮೇಲ್ ವಿಳಾಸ mailtomrfm@gmail.com ಇದೆ. ಆ ಇ–ಮೇಲ್ ವಿಳಾಸ ಬಹಳ ವರ್ಷಗಳಿಂದ ಇದೆ. ನಿಪಿ2 ನ್ನು ವಾದಿ ಸಂಸ್ಥೆಯವರು ನಮ್ಮ ಸಂಸ್ಥೆಗೆ ಖುದ್ದು ಜಾರಿ ಮಾಡಿದ್ದಾರೆ ಎಂದರೆ ಸರಿಯಲ್ಲ. ನಿಪಿ2 ರಲ್ಲಿ 3 ಲಕ್ಷ ಮುಂಗಡ ಹಣದ ಬಗ್ಗೆ ನಮೂದಿದೆ ಎಂದರೆ ಇರಬಹುದು. ವಾದಿ ಸಂಸ್ಥೆಯವರು ಸರಕು ಸರಬರಾಜು ಮಾಡದಿದ್ದಾಗ ಮುಂಗಡ ಹಣ ವಾಪಸ್ ಪಡೆಯಲು ಯಾವುದೇ ಕಾನೂನು ಕ್ರಮ ತೆಗೆದುಕೊಂಡಿಲ್ಲ. ಸಾಕ್ಷಿ ಸ್ವತಃ ಹೇಳುತ್ತಾರೆ ಅವರು ವಾಪಸ್ ನೀಡುವುದಾಗಿ ಹೇಳಿದ್ದರಿಂದ ನಾವು ಕ್ರಮ ಕೈಗೊಂಡಿರುವುದಿಲ್ಲ. 2020 ರ ನವೆಂಬರ್ ಅಥವಾ ಡಿಸೆಂಬರ್ ನಲ್ಲಿ ನಾನು ವಾದಿ ಸಂಸ್ಥೆಯವರನ್ನು ಭೇಟಿ ಮಾಡಿದಾಗ ಮುಂಗಡ ಹಣವನ್ನು ಬಡ್ಡಿ ಸಮೇತ ನೀಡುವುದಾಗಿ ಹೇಳಿದ್ದರು. ಆದರೆ ಅವರು ಮುಂಗಡ ಹಣವನ್ನು ವಾಪಸ್ ಮಾಡಿಲ್ಲ. ಆನಂತರ ನಾನು ವಾದಿ ವಿರುದ್ಧ ಯಾವುದೇ ಕ್ರಮ ತೆಗೆದುಕೊಂಡಿರುವುದಿಲ್ಲ. ದಾವೆ ಹಾಕುವ ಮೊದಲು ವಾದಿ ಸಂಸ್ಥೆಯವರು ನಮ್ಮ ಸಂಸ್ಥೆಗೆ ವಕೀಲರ ನೋಟಿಸ್ ಕಳುಹಿಸಿದ್ದರು ಎಂದರೆ ನಿಜ. ಆ ನೋಟಿಸಿಗೆ ನಾವು ಉತ್ತರ ನೀಡಿಲ್ಲ ಎಂದರೆ ಸರಿಯಲ್ಲ. ರಮೇಶ್ ಎಂಬ ವಕೀಲರ ಮೂಲಕ ಉತ್ತರ ನೀಡಿರುತ್ತೇವೆ. ಆ ರೀತಿ ಉತ್ತರ ನೀಡಿದ ಬಗ್ಗೆ ದಾಖಲೆ ಇದೆ, ಅದನ್ನು ಹಾಜರುಪಡಿಸಲು ತೊಂದರೆ ಇಲ್ಲ. ಅದರಲ್ಲಿ ಮುಂಗಡ ಹಣ ವಾಪಸ್ ನೀಡಲು ಒಪ್ಪಿದ ಬಗ್ಗೆ ನಮೂದಿದೆ. ಈ ದಾವೆ ದಾಖಲಾದ ಬಳಿಕ ಮೊದಲ ಬಾರಿಗೆ ಉತ್ತರ ಕೊಟ್ಟಿದ್ದಾಗಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಡಿ4 ರಿಂದ 8 ರ ದಾಖಲೆಗಳಲ್ಲಿ ನಾವು ಸರಬರಾಜು ಮಾಡುವ ಮೈದಾ, ಗೋದಿಹಿಟ್ಟು ಮುಂತಾದ ವಸ್ತುಗಳ ಬಗ್ಗೆ ನಮೂದಿದೆ. ನಿಡಿ4 ರಲ್ಲಿ ಯಾವ ಪದಾರ್ಥ ಎಂದು ನಮೂದಿಲ್ಲ ಎಂದರೆ ನಿಜ. ನಿಡಿ4 ರಿಂದ 8 ರಲ್ಲಿರುವ ಸಂಖ್ಯೆಗಳಿಗೂ ನಿಡಿ1 ರಲ್ಲಿನ ಸಂಖ್ಯೆಗಳಿಗೂ

ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನಿಡಿ4 ರಲ್ಲಿ ಒಂದು ಕೆ.ಜಿ ಎಂದು ನಮೂದಿರುವುದು 500 ಗ್ರಾಂ ನ ಎರಡು ಪ್ಯಾಕೆಟ್ ಆಗಿರುತ್ತದೆ. ನಿಪಿ4 ರಿಂದ 13 ನ್ನು ಈ ದಾವೆಗೋಸ್ಕರ ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ನಿಡಿ9 ರಿಂದ 13 ರಲ್ಲಿ ಮುಂಗಡ ಹಣ ಕೊಟ್ಟ ಬಗ್ಗೆ ಮತ್ತು ಅದನ್ನು ವಾಪಸ್ ಮಾಡಿದ ಬಗ್ಗೆ ನಮೂದಿಲ್ಲ ಎಂದರೆ ನಿಜ. ನಿಡಿ4 ರಿಂದ 8 ಆರ್ಡರಗಳನ್ನು ಕೊಟ್ಟ ವ್ಯಕ್ತಿಗಳಿಗೆ ನಾನು ಯಾವುದೇ ಹಣ ಪಾವತಿಸಿಲ್ಲ. ನನ್ನ ಪ್ರತಿವಾದ ಪತ್ರದ ಪ್ಯಾರ 20 ರಲ್ಲಿ ಹೇಳಿರುವಂತೆ 5 ಲಕ್ಷ ನಷ್ಟವಾದ ಬಗ್ಗೆ ಆಡಿಟ್ ವರದಿ ಅಥವಾ ಬೇರೆ ದಾಖಲೆ ಇಲ್ಲ. ನಾನು ತಯಾರಿಸಿದ ಪದಾರ್ಥಗಳು ನಷ್ಟವಾದ ಬಗ್ಗೆ ದಾಖಲೆ ಇಲ್ಲ. ಪ್ರತಿವಾದ ಪತ್ರದ ಪ್ಯಾರ 19 ರಲ್ಲಿ ಕೇಳಿರುವ 3 ಲಕ್ಷ ಹಣವನ್ನು ವಾದಿಯರಿಗೆ ಪಾವತಿಸಿದ 3 ವರ್ಷದ ಬಳಿಕ ಕೇಳುತ್ತಿದ್ದೇವೆ ಎಂದರೆ ಸರಿಯಲ್ಲ. ನಾನು ವಾದಿಯರಿಗೆ ಆದೇಶಿಸಿದ ಸರಕುಗಳು ಲಭ್ಯವಿದ್ದರೂ ಸಹ ನಾನು ಬಾಕಿ ಹಣವನ್ನು ಪಾವತಿಸಿ ಆ ಸರಕನ್ನು ಪಡೆದಿರುವುದಿಲ್ಲ ಎಂದರೆ ಸರಿಯಲ್ಲ. ಬಾಕಿ ಹಣವನ್ನು ಕೊಡುವುದರಿಂದ ತಪ್ಪಿಸಿಕೊಳ್ಳಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ.,

2 ನೇ ಅಪರ ಜಿಲ್ಲಾ ಮತ್ತು ಸತ್ತ ನ್ಯಾಯಾಧೀಶರು
ಮೈಸೂರು